ದಿನಾಂಕಃ 24.03.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

7. ಆರೋಪಿ ನನ್ನ ಮೇಲೆ ಹಲ್ಲೆ ಮಾಡಿದ್ದರಿಂದ ನನಗೆ ಆಗಿದ್ದ ಗಾಯಗಳ ಫೋಟೋಗಳನ್ನು ನನ್ನ ಚಿಕ್ಕಪ್ಪನ ಮಗನಾದ ಅಭಿಷೇಕ್ ರವರು ತಮ್ಮ ಮೊಬೈಲ್ ನಿಂದ ನಾನು ಮೊದಲಿಗೆ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾಗ ನಂತರ ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ತೆಗೆದಿದ್ದಾರೆ. ಸದರಿ ಫೋಟೋಗಳನ್ನು ಅಭಿಷೇಕ್ ರವರು ತಮ್ಮ ವಾಟ್ಸ್ ಆಪ್ ಮೂಲಕ ನನ್ನ ವಾಟ್ಸ್ ಆಪ್ ಗೆ ಕಳುಹಿಸಿದ್ದರು. ನಂತರ ನಾನು ಚಿಕ್ಕಮಗಳೂರಿನ ಎ ಐ ಟಿ ಸರ್ಕಲ್ ನಲ್ಲಿರುವ ಕಲಾಕಾರ್ ಡಿಜಿಟಲ್ ಸ್ಟೂಡಿಯೋ ಗೆ ಹೋಗಿ ನನ್ನ ಮೊಬೈಲನ್ನು ಸದರಿ ಸ್ಟೂಡಿಯೋದವರಿಗೆ ಕೊಟ್ಟೆನು. ಅವರು ನನ್ನ ಎದುರಿಗೆ ನನ್ನ ಮೊಬೈಲನ್ನು ತಮ್ಮ ಕಂಪ್ಯೂಟರ್ ಗೆ ಅಳವಡಿಸಿ ನನ್ನ ಮೊಬೈಲ್ ಗೆ ಅಭಿಷೇಕ್ ರವರು ವಾಟ್ಸ್ ಆಪ್ ಮೂಲಕ ಕಳುಹಿಸಿದ್ದ ಫೋಟೋಗಳನ್ನು ಸಿಡಿಗೆ ವರ್ಗಾಯಿಸಿ ಸದರಿ ಸಿಡಿಯನ್ನು ನನಗೆ ಕೊಟ್ಟರು ಮತ್ತು ಫೋಟೋಗಳನ್ನು ಪ್ರಿಂಟ್ ಹಾಕಿ ಕೊಟ್ಟರು. ನಾನು ಅಭಿಷೇಕ್ ರವರನ್ನು ಕುರಿತು ಆಗ ನನ್ನ ಗಾಯದ ಫೋಟೋಗಳನ್ನು ತೆಗೆದಿದ್ದ ಮೊಬೈಲ್ ಬಗ್ಗೆ ವಿಚಾರಿಸಿದೆನು ಆಗ ಆತ ಸದರಿ ಮೊಬೈಲ್ ಹಾಳಾಗಿದ್ದಾಗಿ ಮತ್ತು ಆತ ಹೊಸ ಮೊಬೈಲನ್ನು ಖರೀದಿಸಿರುವುದಾಗಿ ತಿಳಿಸಿದನು.

8. ಮೇಲೆ ಹೇಳಿದ ನನ್ನ ಗಾಯಗಳ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಒಂದು ಫೋಟೋವನ್ನು ನೋಡಿ ಗುರುತಿಸಿ ಅದರಲ್ಲಿ ತನ್ನ ಹೊಟ್ಟೆಯ ಭಾಗಕ್ಕೆ ಆರೋಪಿ ಚಾಕು ಚುಚ್ಚಿರುವುದು ಮತ್ತು ಗಾಯವಾಗಿರುವುದು ಕಂಡು ಬರುತ್ತದೆ ಎಂದು ನುಡಿದು ಸದರಿ ಫೋಟೋವನ್ನು ತಾನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದ ಸಮಯದಲ್ಲಿ ಅಭಿಷೇಕ್ ರವರು ತೆಗೆದುಕೊಂಡಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿಪಿ.3 ಎಂದು ಗುರುತಿಸಲಾಯಿತು.

9. ಸಾಕ್ಷಿ ಐದು ಫೋಟೋಗಳನ್ನು ನೋಡಿ ಗುರುತಿಸಿ ಸದರಿ ಫೋಟೋಗಳನ್ನು ತಾನು ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದ ಸಮಯದಲ್ಲಿ ಅಭಿಷೇಕ್ ರವರು ತೆಗೆದುಕೊಂಡಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ಒಟ್ಟಾಗಿ ನಿಪಿ.4 ಎಂದು ಗುರುತಿಸಲಾಯಿತು. ಸದರಿ ಫೋಟೋಗಳನ್ನು ನನ್ನ ಮೊಬೈಲ್ ನಿಂದ ವರ್ಗಾಯಿಸಿದ ಸಿಡಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಫೋಟೋಗಳನ್ನೊಳಗೊಂಡ ಸಿಡಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.5 ಎಂದು ಗುರುತಿಸಲಾಯಿತು. ನನಗೆ ಕಂಪ್ಯೂಟರ್ ಬಗ್ಗೆ ಯಾವುದೇ ಮಾಹಿತಿ ಇಲ್ಲ ಮತ್ತು ಜ್ಞಾನವಿಲ್ಲ.

<u>ಪಾಟೀ ಸವಾಲು:</u>

(ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.